ಅಧ್ಯಕ್ಷರು.— ಆ ಪರಿಸ್ಥಿತಿ ಈಗ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಯಾತಕ್ಕೋಸ್ಕರ ಹೀಗೆ ಆಯಿತು. ಇಬ್ಬರು ಕಿರಿಯ ಅಧಿಕಾರಿಗಳಾದ ಶ್ರೀ ಸಣ್ಣತಿಪ್ಪಯ್ಯ ಮತ್ತು ಶ್ರೀ ಚಿಕ್ಕಬೆರಸ್ ಎಂಬುವವರನ್ನು ೧೫೦ ಹಿರಿಯ ಅಧಿಕಾರಗಳನ್ನು ಕಡೆಗಣಿಸಿ ಮೇಲೆ ಹಾಕಿದ್ದಾರೆ.

ಅಧ್ಯಕ್ಷರು.— ಅದರ ಬಗ್ಗೆ ರೂಲ್ ೩೧೨ರ ಪ್ರಕಾರ ನೋಟೀಸ್ ಕಳುಹಿಸಿದ್ದೀರಿ, ಸಾಯಂಕಾಲ ತೆಗೆದುಕೊಳ್ಳಬಹುದು.

ಶ್ರೀ ಎಚ್. ಟಿ. ಕೃಷ್ಣಪ್ಪ — ನೇರವಾಗಿ ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.— ಮಾನ್ಯ ಅಧ್ಯಕ್ಷರೇ, ಇದು ವಿಶೇಷವಾಗಿ ಚರ್ಚೆಗೆ ಯೋಗ್ಯವಾದ ವಿಚಾರವಲ್ಲ. ಇಷ್ಟು ಮಾತ್ರ ಹೇಳಬಯಸುತ್ತೇನೆ....

Sri ABDUL KHUDUS ANWAR.— This is a question of 2000 employees remaining outside.

Sri S. M. KRISHNA.— It is not at all concerning 2000 employees. I do not know where my distinguished friend, Mr. Khudus Anwar has got this information. As the Leader of the Opposition very rightly put it, this concerns about 200 or 300 Officers. There are 400 Officers out of which some of them have disassociated with this move. Certainly it boils to 200 or 300 Officers only. Let me assure this House that no Company worth the name even with the modicum of discipline could subject themselves to such a thing.

ಅಧ್ಯಕ್ಷರು.— ಮಂತ್ರಿಗಳು ಇದರ ಬಗ್ಗೆ ಸಾಯಂಕಾಲ ಸ್ಟೇಟ್‌ಮೆಂಟ್ ಮಾಡಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.— ತಳನೇ ತಾರೀಖು ರಾಯಚೂರಿನ ಶ್ರೀ ಬಿ. ಜಿ ನಾರಾಯಣಗೌಡ ಪೂಲ್ ಆಫೀಸರ್, ಲ್ಯಾಂಡ ಡವಲಪ್‌ಮೆಂಟ್— ಅದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಅದಕ್ಕೆ ಇನ್ನೂ ಉತ್ತರ ಬರಲಿಲ್ಲ.

ಅಧ್ಯಕ್ಷರು — ನಾಳೆಯ ದಿನ ಬರುತ್ತದೆ.

Re : Giving protection to ryots.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಕಳೆದ ಅಧಿವೇಶನದಲ್ಲಿ ಭೂ ಸುಧಾರಣೆ ಮಸೂದೆ ಅಂಗೀಕಾರವಾಗಿ ಅದು ಈಗ ರಾಷ್ಟ್ರಾಧ್ಯಕ್ಷರ ಮುಂಜೂರಾತಿ

ಪಡಿಸಿ ಬರಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಈಗಾಗಲೇ ಫಸಲು ಜಮೀನಿನಲ್ಲಿ ನಿಂತಿವೆ. ಫಸಲು ಸಂಪೂರ್ಣವಾಗಿ ಬರುವುದರೊಳಗೆ ಒಕ್ಕಲು ಎಬ್ಬಿಸಲಿಕ್ಕೆ ಕುತಂತ್ರ ಮಾಡುತ್ತಿದ್ದಾರೆ. ಇದರಿಂದ ದುಷ್ಪರಿಣಾಮ ಆಗತಕ್ಕ ಪರಿಸ್ಥಿತಿ ಇದೆ. ಆದುದರಿಂದ ತತ್‌ಕ್ಷಣ ಸರ್ಕಾರ ಪ್ರವೇಶ ಮಾಡಿ ಯಾವುದೇ ರೀತಿಯ ಒಕ್ಕಲಿನಿಂದ ಜಮೀನು ಸ್ವಾಧೀನ ತಪ್ಪಿಸದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ವಿ. ಕಕ್ಕಿಲಾಯ.— ಕೋ-ಆಪರೇಟಿವ್ ಮಿಸ್ಟರ್‌ರವರ ಮತ್ತು ನನ್ನ ಕ್ಷೇತ್ರದಲ್ಲಿ ಈ ರೀತಿ ಕುತಂತ್ರ ನಡೆಯುತ್ತಿದೆ, ಅನೇಕ ಪತ್ರಗಳೂ ಬರುತ್ತಿವೆ. ಇದರ ಬಗ್ಗೆ ಯಾವುದೇ ಕ್ರಮ ಇದುವರೆಗೂ ತೆಗೆದುಕೊಂಡಿಲ್ಲ. ಗಂಭೀರವಾದ ಪರಿಸ್ಥಿತಿ ಉದ್ಭವವಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಗಮನ ಹರಿಸಬೇಕು.

ಶ್ರೀ ಎಚ್. ಎಂ ಚನ್ನಬಸಪ್ಪ.— ತಾವು ಎಷ್ಟು ಕಳಕಳಿಯಿಂದ ಈ ವಿಷಯ ವ್ಯಕ್ತಪಡಿಸುತ್ತಿದ್ದೀರಿ, ಅಷ್ಟೇ ಕಳಕಳಿ ಸರ್ಕಾರಕ್ಕೆ ಇದೆ. ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

Re : Furnishing replies to Questions

ಶ್ರೀ ಕೆ. ಶ್ರೀರಾಮುಲು.— ಈ ಅಧಿವೇಶನದಲ್ಲಿ ೧೦ ಪ್ರಶ್ನೆ ಕೇಳಿದ್ದೆ, ನನ್ನ ಸೈರು ಹಾಜರಿಯಲ್ಲಿ ಒಂದಕ್ಕೆ ಮಾತ್ರ ಉತ್ತರ ಬಂತು. ಕಳೆದ ಅಧಿವೇಶನದಲ್ಲಿಯೂ ಕೂಡ ನನ್ನ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ದಯವಿಟ್ಟು ಉತ್ತರ ದೊರಕಿಸಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.— ರಾಜ್ಯದ ಅನೇಕ ಪ್ರೌಢ ಶಾಲೆಗಳಲ್ಲಿ ಜೂನ್ ತಿಂಗಳಿಂದ ಮಾಸ್ಟರ್ ಇಲ್ಲ ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದೆ, ಪರೀಕ್ಷೆ ನಡೆಯುತ್ತಿದೆ, ಪಬ್ಲಿಕ್ ಪರೀಕ್ಷೆಗಳು ನಡೆಯಲಿವೆ ಇನ್ನು ಕೇವಲ ೩-೪ ತಿಂಗಳು ಇದೆ. ವಿದ್ಯಾರ್ಥಿಗಳು ತೊಂದರೆಗೆ ಸಿಕ್ಕಿ ಹಾಕಿಕೊಂಡಿದ್ದಾರೆ. ಡಿಪಾರ್ಟ್‌ಮೆಂಟಿನವರು ಎಕಾನಮಿ ಮೆಜರ್ಸ್ ಇದೆ. ಟೀಚರ್ಸ್‌ನ್ನು ಅಪಾಯಿಂಟ್ ಮಾಡುವ ಹಾಗಿಲ್ಲ ಎಂದು ಅವರು ಹೇಳುತ್ತಿದ್ದಾರೆ. ವಿದ್ಯಾ ಮಂತ್ರಿಗಳನ್ನು ಕೇಳಿದಾಗ ಪಾಠ ಹೇಳಿಕೊಡುವ ಟೀಚರ್ಸ್‌ಗೆ ಎಕಾನಮಿ ಮೆಜರ್ಸ್ ಅಪ್ಲೈ ಆಗುವುದಿಲ್ಲ ಎಂದು ಹೇಳಿದರು.

ಅಧ್ಯಕ್ಷರು — ಅದರ ಬಗ್ಗೆ ನಾಳೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ — ಮಲೆನಾಡಿನಲ್ಲಿ ಎಲ್ಲಾ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಮುಚ್ಚಲ್ಪಟ್ಟಿವೆ. ಸ್ಟೇಟ್‌ಮೆಂಟ್ ಕೊಡಬೇಕಾದರೆ ಪ್ರಾಥಮಿಕ